

# ಹಚ್ಚೇವು ನೆನಪುಗಳ ದೀಪ...

**ಯೋಧರ ಕುರಿತು ಅಭಿಮಾನ–ಗೌರವ ಮೂಡಿಸುವ ಧಾರವಾಡದ ಕಾರ್ಗಿಲ್ ಸ್ಮಾರಕ ದೇಶಪ್ರೇಮದ ಪ್ರತೀಕವೂ ಹೌದು.**

■ ಡಾ. ಲಕ್ಷ್ಮಣ ವಿ.ಎ.

ಯುದ್ಧದ ಸಂದರ್ಭದಲ್ಲಿ ಜಾತಿ–ಮತದ ಎಲ್ಲೆ ಮೀರಿ ಇಡೀ ದೇಶವೇ ಒಗ್ಗಟ್ಟಾಗುತ್ತದೆ. ಆ ಮೂಲಕ ಗಡಿಯಲ್ಲಿ ಸೆಣಸುವ ಯೋಧರಿಗೆ 'ನಾವೆಲ್ಲ ಒಂದು' ಎನ್ನುವ ಸಂದೇಶ ರವಾನೆಯಾಗುತ್ತದೆ. ಕಾರ್ಗಿಲ್ ಕದನವಾಗಿರಬಹುದು, ಪುಲ್ವಾಮಾ ಭಯೋತ್ಪಾದಕರ ದಾಳಿಯಾಗಿರಬಹುದು – ಅಂಥ ಸಂಘರ್ಷಗಳೆಲ್ಲ ದೇಶದ ಏಕತೆಯ ಪ್ರದರ್ಶನದ ಸಂದರ್ಭಗಳಾಗುತ್ತವೆ ಹಾಗೂ ಆ ಪ್ರದರ್ಶನದ ರೂಪವಾಗಿ ದೇಶದ ಗಲ್ಲಿ ಗಲ್ಲಿಗಳಲ್ಲಿ ಯೋಧರ ಕಟೌಟುಗಳು ರಾರಾಜಿಸುತ್ತವೆ. ಹುತಾತ್ಮ ಯೋಧರಿಗೆ ಗೌರವ ಸಲ್ಲಿಸುವ ಮೇಣದಬತ್ತಿಯ ಮೆರವಣಿಗೆಗಳು, ಮೌನಾಚರಣೆಗಳು ಹಾಗೂ ಯೋಧರ ಕುಟುಂಬಕ್ಕೆ ಹೆಗಲಾಗುವ 'ಬಹುತ್ವ ಭಾರತ'ವನ್ನು ನೆನಪಿಸಿಕೊಂಡರೆ ಎಂತಹ ಕಲ್ಲು ಹೃದಯಗಳೂ ಕರಗಿ ಒಂದು ಕ್ಷಣ ಮೂಕವಾಗುತ್ತವೆ.

ಭೋಪಾಲದ ಮುಸ್ಕಾನ್ ಅಹಿವಾರ ಎಂಬ ಹನ್ನೊಂದು ವರ್ಷದ ಬಾಲಕಿ ತನ್ನ ಹುಟ್ಟುಹಬ್ಬಕ್ಕೆಂದು ಉಡುಗೊರೆಯಾಗಿ ದೊರೆತ 560 ರೂಪಾಯಿಗಳನ್ನು ಪುಲ್ವಾಮಾ ಹುತಾತ್ಮ ಯೋಧರ ಕುಟುಂಬಕ್ಕೆ ದೇಣಿಗೆ ನೀಡಿದ್ದಳು. ಆ ಪುಟ್ಟ ಹುಡುಗಿ ಮಾತ್ರವಲ್ಲ, ಅಜ್ಮೀರದ ದೇವಕೀ ಶರ್ಮಾ ಎನ್ನುವ ಭಿಕ್ಷುಕಿಯ 6.5 ಲಕ್ಷ ರೂಪಾಯಿ ಜೀವಮಾನದ ದುಡಿಮೆ, ಸೂರತ್‌ನ ವಜ್ರದ ವ್ಯಾಪಾರಿಯೊಬ್ಬರು ಮಗಳ ಮದುವೆಗೆಂದು ತೆಗೆದಿರಿಸಿದ 11 ಲಕ್ಷ ರೂಪಾಯಿ ಮೊತ್ತ – ಇವೆಲ್ಲ ಪುಲ್ವಾಮಾ ಹುತಾತ್ಮ ಯೋಧರ ಕುಟುಂಬದ ದೇಣಿಗೆಗೆ ಸಂದಾಯವಾಗಿದ್ದವು. ಕ್ರಿಕೆಟಿಗ ವೀರೇಂದ್ರ ಸೆಹ್ವಾಗ್ ಮೃತ ಯೋಧರ ಪುತ್ರರನ್ನು ದತ್ತು ಸ್ವೀಕರಿಸಿದ್ದು, ಕಂಬನಿಯ ಮಹಾಪೂರದ ನಡುವೆ ಜಿನುಗುವ ಅಂತಃಕರಣಕ್ಕೊಂದು ಉದಾಹರಣೆ.

ವಿಪರ್ಯಾಸವೆಂದರೆ, ಯುದ್ಧದ ಕಾವು ಕಡಿಮೆಯಾದಂತೆಲ್ಲ ಬೀದಿ ಬದಿಯ ಕಟೌಟುಗಳ ಯೋಧ ಜನಮಾನಸದಿಂದ ಕ್ರಮೇಣ ಮಾಯವಾಗುತ್ತಾನೆ, ಮೇಣದ ಬತ್ತಿಯಂತೆ ಸ್ಮೃತಿಪಟಲದಿಂದ ಕರಗಿ ಹೋಗುತ್ತಾನೆ. ಸಮಾಜದ ನೆನಪಿನ ಶಕ್ತಿ ತೀರಾ ಕಡಿಮೆ. ಇಂಥ ಯೋಧ ಲೋಕಕ್ಕೆ ನೆನಪಾಗಲು ಮತ್ತೊಮ್ಮೆ ಯುದ್ಧವಾಗಬೇಕು.

ಯೋಧ ಸಾಯಲು ಸಮರ ಭೂಮಿಯೇ ಆಗಬೇಕಿಲ್ಲ. ಎದುರಾಳಿಯ ಗುಂಡಿನ ಸವಾಲುಗಳಿಗಿಂತ ಮಿಗಿಲಾಗಿ ಅವರು ಸಿಯಾಚಿನ್‌ನ ಮೂಳೆ ಹಿಮಗಟ್ಟುವ ಚಳಿಯೊಂದಿಗೆ ಹೋರಾಡುತ್ತಾರೆ. ಚಲಿಸುವ ಮಿಲಿಟರಿ ವ್ಯಾನುಗಳನ್ನೇ ಇದ್ದಕ್ಕಿದ್ದಂತೆ ಆಪೋಷಣಗೈಯುವ ಹಿಮಪಾತ, ಬಿಕಾನೇರ್ ಮರಳುಗಾಡಿನ ಸೂರ್ಯಾಘಾತ ಅವರಿಗೆ ಸವಾಲಾಗುತ್ತದೆ. ಪೂರ್ವಾಂಚಲದ ದಟ್ಟ ಕಾಡಿನಲ್ಲಿ ಕಚ್ಚುವ ಮಲೇರಿಯಾ ಸೊಳ್ಳೆಗಳೊಂದಿಗೆ ಮಲ್ಕನಗಿರಿಯ ಕಡಿದಾದ ಕಾಡುದಾರಿಯಲ್ಲಿ ಹುದುಗಿಸಿದ ಬಾಂಬುಗಳು ಯೋಧರನ್ನು ಕಾಡುತ್ತವೆ. ಇಂತಹ ಪ್ರತಿಕೂಲ ಸಂದರ್ಭದಲ್ಲಿ ಸಂಭವಿಸುವ ಸಾವುಗಳ್ಯಾವುವೂ ಹೆಚ್ಚಿನ ಸುದ್ದಿಯಾಗುವುದಿಲ್ಲ, ಜನರ ಗಮನ ಸೆಳೆಯುವುದಿಲ್ಲ. ಆ ಸಂದರ್ಭಗಳಲ್ಲಿ ಕೂಡ ಮೃತನು ಸೈನಿಕನೇ ಆದರೂ, ಆತ ದೇಶ ಸೇವೆಗಾಗಿಯೇ ಮಡಿದರೂ ಯುದ್ದ ಕಾಲದಲ್ಲಿ ಮೃತಪಟ್ಟ ಯೋಧನಿಗೆ ಸಿಕ್ಕ ಗೌರವ ಅನುಕಂಪಗಳು ಉಳಿದ ಸಮಯದಲ್ಲಿ ಸಿಗುವುದಿಲ್ಲ.

ಸಾರ್ವಜನಿಕರ ಗಮನಸೆಳೆಯದೆ ಸೈನಿಕರ ಶವ ಪೆಟ್ಟಿಗೆಗಳು ತವರಿಗೆ ಬರುತ್ತವೆ. ಆ ದುಃಖವನ್ನು ಎದುರುಗೊಳ್ಳಬೇಕಾದ ಕುಟುಂಬಗಳು ಬಹುತೇಕ ಸಂದರ್ಭಗಳಲ್ಲಿ ಬಡತನವನ್ನೇ ಹಾಸಿಹೊದ್ದಿರುತ್ತವೆ. ಅವರ ಕುಟುಂಬದಲ್ಲಿ ಯಾರೂ ಅಷ್ಟಾಗಿ ಓದಿದವರಿರುವುದಿಲ್ಲ. ಸರ್ಕಾರ ನೀಡುವ ಸೌಲಭ್ಯಗಳ ಅರಿವು ಅವರಿಗಿರುವುದಿಲ್ಲ. ಈ ಕೊರತೆಯನ್ನು ನಿವಾರಿಸುವ ಹಿನ್ನೆಲೆಯಲ್ಲಿ ರೂಪುಗೊಂಡಿದ್ದು 'ಉತ್ತರ ಕರ್ನಾಟಕ ಸೈನಿಕ ಕಲ್ಯಾಣ ಸಮಿತಿ'.

'ಉತ್ತರ ಕರ್ನಾಟಕ ಸೈನಿಕ ಕಲ್ಯಾಣ ಸಮಿತಿ'ಯ ಹಿಂದೆ ಮತ್ತೊಂದು ಕಥೆಯಿದೆ. 1970ರಲ್ಲಿ ದೇಶ ಸಾಕ್ಷರತೆಯ ದಾರಿಯಲ್ಲಿತ್ತು. ಆಗ ತಾನೇ ಚೀನಾದೊಂದಿಗೆ ಸೋತ ಭಾರತ ಸೇನೆ ಅವಮಾನದಿಂದ ಕುದಿಯುತ್ತಿತ್ತು. ಇನ್ನೊಂದು ಕಡೆ ಕಾಲು ಕೆರೆದು ಜಗಳ ತೆಗೆಯುವ ಪಾಕಿಸ್ತಾನ. ಇಂತಹ ಸಂದರ್ಭದಲ್ಲಿ ಮಿಲಿಟರಿಯನ್ನು ಬಲಗೊಳಿಸುವುದು ದೇಶದ ಆದ್ಯತೆಯಾಗಿತ್ತು. ಇದರ ಜೊತೆಗೆ, ದೇಶದ ಯುವಜನರಲ್ಲಿ ಜಾಗೃತಿ ಮೂಡಿಸಿ ಶಿಕ್ಷಣದೆಡೆಗೆ ಅವರನ್ನು ಸೆಳೆದು ದೇಶಪ್ರೇಮ ಜಾಗೃತಗೊಳಿಸುವ ಸವಾಲು ಕೂಡ ಅಷ್ಟೇ ಅವಶ್ಯವಾಗಿತ್ತು. ಆಗ ಹುಟ್ಟಿಕೊಂಡಿದ್ದು 'ಭಾರತೀಯ ಯುವ ಸಂಘ'. ಮುಂದೆ 1971ರ ಪಾಕಿಸ್ತಾನದೊಂದಿಗಿನ ಯುದ್ಧದಲ್ಲಿ ಮೃತರಾದ ಯೋಧರ ನೆರವಿಗೆಂದೇ ಇದರ ಹೆಸರು 'ಉತ್ತರ ಕರ್ನಾಟಕ ಸೈನಿಕ ಕಲ್ಯಾಣ ಸಮಿತಿ'ಯಾಗಿ ಬದಲಾಯಿತು ಎಂದು ಸಮಿತಿ ರೂಪುಗೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸಿದವರಲ್ಲಿ ಒಬ್ಬರಾದ ಕೃಷ್ಣ ಜೋಶಿ ನೆನಪುಗಳನ್ನು ಹಂಚಿಕೊಳ್ಳುತ್ತಾರೆ.

'ಗಡಿಯಲ್ಲಿ ಕದನ ಜಾರಿ ಇರುವಾಗಲೇ ಧಾರವಾಡದ ಯೋಧ ವಸಂತಲಾಡ